ಬೆಂಗಳೂರು ಸಿಟಿ ಮ್ಯುನಿಸಿಪಲ್ ಆಫೀಸಿನಿಂದ.

ಇಸ್ತಿಹಾರ್.

ತಾರೀಖು 12ನೆ ಜನವರಿ 1907.

ಇದರಿಂದ ಸರ್ವಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ :—ಗೌರ್ನಮೆಂಟಿನಿಂದ ಸಾದರಾದ 29—6—1901ನೆ ಮ ಕ್ರಂ 17691—L. B. (P) 633ನೆ ನಂಬರ್ ಪ್ರೊಸೀಡಿಂಗ್ಸ್ ಅನುಸರಿಸಿ ಇದರ ಮಾ ಜ್ಞೆನ್ನಲ್ಲಿ ತೋರಿಸಿರುವ ಬೆಂಗಳೂರು ಸಿಟಿ ಬ ಸವನ ಗುಡಿ ಮಲ್ಲೇ ಶ್ವರ ಎಕ್ಸ್ಟೆರ್ಷ್ಟಗೆ ಸೇರಿದ ಕಟ್ಟಡ ಕಟ್ಟತಕ್ಕ ಸೈಟುಗಳನ್ನ 1907ನೆ ಇಸವಿ ಜನವರಿ ತಾ॥ 29-30ರಲ್ಲು ಹರಾಜು ಮೂಲಕ ವಿಕ್ರಯಿಸತಕ್ಕದ್ದೆಂತ ನಿಶ್ಚಯಿಸಿ ಇರುತ್ತಾಗಿ ಹರಾಜಿನಲ್ಲಿ ಛಡ್ ಸವಾಲ್ ಮೂಲಕ ಪಡದುಕೊಳ್ಳಲು ಇಷ್ಟವುಳ್ಳವರು ಅದೇ ತಾರೀಖು ಪ್ರಾತಃಕಾಲ 8 ಘಂಟೆ ಲಾಗಾಯಿತು ಆಯಾಯ ಸೈಟುಗಳ ಬಳಿ ಹಾಜರಿದ್ದು ಛಡ್ ಸವಾಲ್ ಮೂಲಕ್ಕ ತಾ ಕೆಳಗೆ ಕಂಡ ಪ್ರಕಾರ ಷರತ್ತುಗಳಿಗೆ ವಳಪಟ್ಟು ಛಡ್‌ಸವಾಲ್‌ನಲ್ಲಿ ಪಡದುಕೊಳ್ಳಬಹುದಾಗಿರುತ್ತೆ. ಆ ದಿವಸ ಹರಾಜು ಪೂರ್ತಿಸದೆ ನಿಲ್ಲುವ ಸೈಟುಗಳನ್ನು ಮರು ದಿವಸಗಳಲ್ಲಿ ಅದೇ ಟೈಮಿನಲ್ಲಿ ಹರಾಜು ಮಾಡಿಸಲ್ಪಡುತ್ತೆ.

	ಬಸವನಗುಡಿ ಎಕ್ಸ್ಟೆರ್ಷ್ಟ.			
3ನೆ A ಬ್ಲಾಕ್	.. 68	... 110 × 30	ಹರಾಜು ತಾರೀಖು. 29—1—07	
	ಮಲ್ಲೇಶ್ವರ ಎಕ್ಸ್ಟೆರ್ಷ್ಟ.			
ಸಪಿಗೆ ಅವಿನ್ಯೂ ರೋಡ್	.... 43 & 44	.. 120 × 30	30—1—07	
	... 45	.. 120 × 50		
ಪಾರ್ಕ್ ಪಶ್ಚಿಮ ರಸ್ತೆ	.. 133-134-135 & 136..	100 × 30		

ಷರತ್ತುಗಳು.

1. ಹರಾಜು ಖೈದಾದ ಕೂಡ್ಲೆ ಛಡ್‌ಸವಾಲ್ ಮೊಬಲಗಿನಲ್ಲಿ ಕೇಕಡಾ 25 ರೂಪಾಯಿನಂತೆ ಆಗುವ ಮೊಬಲಗನ್ನ ತೇವಣಿ ಇಡಬೇಕು. ಹಾಗಿಡದೆ ತಪ್ಪಿದರೆ ಕೂಡ್ಲೆ ದುಸರಾ ಹರಾಜು ಮಾಡಿಸಿ ಬರುವ ಲುಕ್ಸಾನಿಗೆ ಮೊದಲು ಛಡ್‌ಸವಾಲ್‌ದಾರನ್ನ ಗುರಿಮಾಡಲ್ಪಡುತ್ತೆ.

2. ಹರಾಜು ತಾರೀಖು ಲಾಗಾಯಿತು 15 ದಿವಸದೊಳಗಾಗಿ ಬಾಕಿ ನಿಲ್ಲುವ ಮೊಬಲಗಂದರೆ ಛಡ್‌ಸವಾಲ್ ಮೊಬಲಗ್ಗೆ ಭರ್ತಿಯಾಗಿ ಕೊಡತಕ್ಕ ಕೇಕಡಾ 75 ರೂಪಾಯಿನಂತೆ ಆಗುವ ಮೊಬಲಗನ್ನ ಛಡ್‌ಸವಾಲ್‌ದಾರ ಹಾಜರಪಡಿಸಿ ರಸೀತಿ ಪಡಿಯಬೇಕು. ಇದಕ್ಕೆ ತಪ್ಪಿದರೆ ತೇವಣಿ ಮೊಬಲಗನ್ನ ಸರ್ಕಾರಕ್ಕೆ ದಂಡವಾಗಿ ತೆಗದುಕೊಳ್ಳುವದಲ್ಲದೆ ಪುನಹ ಅಂಥಾ ಸೈಟನ್ನ ದುಸರಾ ಹರಾಜಿಗೆ ಈಡುಮಾಡಿ ಬರುವ ನಷ್ಟಕ್ಕೆ ಮೊದಲು ಛಡ್‌ಸವಾಲ್‌ದಾರನ್ನ ಗುರಿಮಾಡಲ್ಪಡುತ್ತೆ.

3. ಹರಾಜು ಮುಂಜೂರಾದ ಕೂಡ್ಲೆ ಸೈಟನ್ನ ಛಡ್‌ಸವಾಲ್‌ದಾರನು ಸ್ವಾಧೀನಪಡಿಸಿಕೊಳ್ಳಬೇಕು.

4. ಕೊಟ್ಟ ತಾರೀಖಿನಾರಭ್ಯ 30 ದಿವಸದೊಳಗಾಗಿ ಕಟ್ಟಡದ ಕೆಲಸವನ್ನ ಸುರೂ ಮಾಡತಕ್ಕದ್ದು; ಮತ್ತು 6 ತಿಂಗಳೊಳಗಾಗಿ ಕಟ್ಟಡವನ್ನು ಪೂರೈಸತಕ್ಕದ್ದು.

5. 50 ಅಡಿ ಲಾಂಬಿಗೆ ಕಡಿವೆ ಇಲ್ಲದಷ್ಟು ಜಾಗವನ್ನು ಮೇಲ್ ಜಾವಣಿ ಇಲ್ಲದೆ ಅಂಗಳಕ್ಕಾಗಿ ಅಥವಾ ಗಾಳಿ ಬರತಕ್ಕದ್ದಕ್ಕಾಗಿ ಯಾವಾಗಲೂ ಬಿಟ್ಟಿರಬೇಕು. ಸದರೀ ಸ್ಥಳದಲ್ಲಿ ಹಂಗಾಮಿ, ಯಾ ಖಾಯಂ ಕಟ್ಟಡ ಯಾವದನ್ನೂ ಕಟ್ಟಕೂಡದು.

6. ಕಟ್ಟಡದ ಪ್ಲಿಂತ್ ವಗೈರೆ ಸ್ಯಾನಿಟೆರಿ ಇಂಜನಿಯರವರಿಂದ ಮುಂಜೂರಾಗುವ ವರಿಗೂ ಯಾವಕಟ್ಟಡವನ್ನೂ ಪ್ರಾರಂಭಿಸಕೂಡದು. ಮೊಗಿಗೆ ಮನೆಯನ್ನ ಕಟ್ಟಲೇಕೂಡದು. ಕಟ್ಟಡಗಳೆಲ್ಲಾ ಹೆಂಚಿನದಾಗಿಯಾಗಲಿ ಅಥವಾ ತಾರಕೀದಾಗಲಿ ಇರತಕ್ಕದ್ದು.

7. ನೆಲ ಮತ್ತು ಹಿತ್ತಲು ಮಟ್ಟವು ರೋಜೀನಾ ಪಾಕೇಜಾ ಬಗ್ಗೆ ಕಕ್ಕಸ ಕಟ್ಟತಕ್ಕ ಸ್ಥಳವು ಮತ್ತು ಮನೆ ಬಚ್ಚಲು ನೀರು ಹೋಗುವದಕ್ಕೆ ಕಟ್ಟತಕ್ಕ ಮೊಹರಿ ತರಹೆ ಮತ್ತು ಜಾಗ ಸಹ ಸ್ಯಾನಿಟೆರಿ ಇಂಜನಿಯರವರು ಅಪ್ಪಣೆ ಮಾಡಲು ರೀತಿಯಲ್ಲಿರತಕ್ಕದ್ದು.

8. ಬಂದು ಮತ, ಪಣ ಅಥವಾ ಜಾತಿಯವರಿಗೆ ವಿಭಾಗಿಸಿರುವ ಬೀದಿಯಲ್ಲಿನ ಮನೆಯಲ್ಲಿ ಸದರೀ ಬೀದಿಯ ಸಮಸ್ತ ಜನಗಳ ಬರಹ ಮೂಲಕವಾದ ಒಪ್ಪಿತದ ಮೇಲೆ ಡಿಪ್ಯುಟಿ ಕಮಿಷರ್ಟರವರು ಮುಂಜೂರ್ಮಾಡಿದ ಹೊರ್ತು ಇತರ ಮತ, ಪಣ ಯಾ ಜಾತಿಯವರು ವಾಸಾ ಮಾಡಕೂಡದು.

9. ಕಟ್ಟಡಕ್ಕಾಗಿ ಕೊಟ್ಟರುವ ನಿವೇಶನಗಳಲ್ಲಿ ಹಳ್ಳ ತೆಗಿಯಕೂಡದು. ಕಟ್ಟಡಕ್ಕೋಸ್ಕರವಾಗಿ ಯಾ ನೆಲ ಮಟ್ಟವನ್ನು ಯತ್ತರಿಸುವದಕ್ಕಾಗಲಿ ಒಕ್ಕಾಗುವ ಮಣ್ಣನ್ನ ಸ್ಯಾನಿಟೆರಿ ಇಂಜನಿಯರವರ ಅಪ್ಪಣೆ ಪ್ರಕಾರ ತೋರಿಸಲ್ಪಡುವ ಜಾಗಾದಲ್ಲಿ ತೆಗದುಕೊಳ್ಳತಕ್ಕದ್ದು.

10. ಮೇಲ್ಕಂಡ ಷರತ್ತುಗಳ ಪೈಕಿ ಯಾವದಕ್ಕಾದರು ತಪ್ಪು ನಡದಲ್ಲಿ ಕೊಡಲ್ಪಟ್ಟರುವ ನಿವೇಶನವನ್ನ ಹಿಡುವಳೀದಾರನು ಮತ್ಯಾವ ವಿಚಾರಣೆಯೂ ಇಲ್ಲದೆ ಹೋಗಲಾಡಿಸಿಕೊಳ್ಳುವದಕ್ಕೆ ಗುರಿಯಾಗುವನು.

11. ಮೇಲ್ಕಂಡ ಷರತ್ತುಗಳ ಪೈಕಿ ಯಾವದಕ್ಕಾದರೂ ತಪ್ಪು ನಡದದ್ದಕ್ಕೋಸ್ಕರ ನಿವೇಶನವನ್ನ ಸರ್ಕಾರಕ್ಕೆ ಕೇರಿಸಿಕೊಂಡ ಬಳಿಕ ಹಿಡುವಳೀದಾರನಾಗಲಿ ಅಥವಾ ಅವನಿಂದ ಪಡದುಕೊಂಡವರಾಗಲಿ ಯಾವ ವಿಧವಾದ ಪರಿಹರ ದ್ರವ್ಯಕ್ಕು ಯಾ ಸದರೀ ನಿವೇಶನದ ಮೇಲೆ ಖರ್ಚು ಮಾಡಿರುವ ಲಾಗವಡಿಗೂ ಹಕ್ಕು ದಾರ್ಯಾಗುವದಿಲ್ಲ.

ಎಂ. ಜಿ. ಕೃಷ್ಣಸ್ವಾಮಿರಾವ್,
ವೈಸ್ ಪ್ರೆಸಿಡೆಂಟ್.